**<u>ಸಾಕ್ಷಿಯನ್ನು ದಿಃ 11.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಆರ್.ಎಸ್ ವಕೀಲರಿಂದಃ-</u>**

ನಾನು 9 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ತಂದೆಗೆ ಪಾರ್ಶವಾಯು ಇದ್ದು, ಮಾತು ಸರಿಯಾಗಿ ಬರದ ಕಾರಣ ಅಧಿಕಾರ ಪತ್ರ ಬರೆದುಕೊಟ್ಟಿದ್ದಾರೆ. ತಂದಗೆ ಪಾರ್ಶವಾಯು ಆದ ಬಗ್ಗೆ ಚಿಕಿತ್ಸೆ ಕೊಡಿಸಿರುವುದರ ದಾಖಲೆಯನ್ನು ಹಾಜರು ಮಾಡಿದ್ದಿರಾ ಎಂದರೆ ಸಾಕ್ಷಿ ನಾಟಿ ಔಷಧಿ ಕೊಡಿಸಿದ ಕಾರಣ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ಸಣ್ಣಪ್ಪನಾಯಕ ರವರು ದಾವೆ ಹೂಡಿದ್ದ, ಅವರು ಹಾಕಿದ ದಾವೆಯ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ. ನಾಯಕರ ಬೀದಿ, ಇಲವಾಲದಲ್ಲಿ ನಮ್ಮ ತಂದೆ ಕಳೆದ 35 ವರ್ಷಗಳಿಂದಲೂ ವಾಸ ಇರುತ್ತಾರೆ. ಹಾಗೆ ಅಲ್ಲಿ ವಾಸ ಆಗಿರುವುದಕ್ಕೆ ಅಧಾರ್ ಕಾರ್ಡ, ರೇಶನ್ ಕಾರ್ಡ, ಗುರುತಿನ ಚೀಟಿ ಎಲ್ಲಾ ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೆ ತೊಂದರೆ ಇಲ್ಲ. ಸದರಿ ದಾಖಲೆಗಳಲ್ಲಿ ತಂದೆಯ ಹೆಸರು ಸಣ್ಣಪ್ಪ ನಾಯಕ ಅವರ ತಂದೆ ಬೈರ ನಾಯಕ ಎಂದು ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆಯ ತಂದೆ ಹೆಸರು ಸಣ್ಣ ಸಿದ್ದನಾಯಕ ಎಂದು ಇರುತ್ತದೆ ಎಂದು ನುಡಿಯುತ್ತಾರೆ. ಬೈರ ನಾಯಕ ಎಂಬುವವರು ನಮ್ಮ ತಾಯಿಯ ತಂದೆ ಇರುತ್ತಾರೆ.

ತಂದೆ ಮದುವೆ ಆಗುವುದಕ್ಕೂ ಮೊದಲು ವಡ್ಡಂಬಾಳು ಗ್ರಾಮದಲ್ಲಿ ಇದ್ದರು ಎಂದು ಹೇಳಿದ್ದು, ಆ ಬಗ್ಗೆ ದಾಖಲೆ ಇರುವುದಿಲ್ಲ, ಸಾಕ್ಷಿ ಪುನಃ ಅಲ್ಲಿ 2-3 ವರ್ಷಗಳು ಇದ್ದ ನಂತರ ಕೂಲಿ ಕೆಲಸಕ್ಕೆ ಬೇರೆ ಕಡೆ ಹೋಗಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆ ಸುಮಾರು 12 ವರ್ಷದವರು ಇದ್ದಾಗಲೆ ಬೈರ ನಾಯಕ ರವರು ದತ್ತು ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಹಾಗೆ ದತ್ತು ತೆಗೆದುಕೊಂಡ ಕಾರಣ ಬೈರ ನಾಯಕ ರವರು ತಮ್ಮ ಮಗಳನ್ನೆ ಅವರಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಹುಣಸೂರಿನ ಸಪ್ತಗಿರಿ ಬಡಾವಣೆಯಲ್ಲಿ ನಮ್ಮ ತಂದೆ ಒಂದು ಸೈಟ್ ತೆಗೆದುಕೊಂಡಿದ್ದರು ಎಂದರೆ ಸರಿ. ಸದರಿ ಸಪ್ತಗಿರಿ ಬಡಾವಣೆ ಮೂಕನಹಳ್ಳಿ ಪಂಚಾಯಿತಿಗೆ ಸೇರುತ್ತದೆ ಎಂದರೆ ಸರಿ. ಮೂಕನಹಳ್ಳಿ ಪಂಚಾಯಿತಿಯಿಂದ ನೀಡಿದ ಸೈಟಿನ

ದಾಖಲೆಯಾಗದ ಡಿಮ್ಯಾಂಡ್ ರಿಜಿಸ್ಟರ್ ಅನ್ನು ನೋಡಿ ಗುರುತಿಸಿದ್ದು, ಅದನ್ನು **ನಿಡಿ.1** ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ನನ್ನ ತಂದೆ ಹೆಸರು ಸಣ್ಣಪ್ಪ ನಾಯಕ ಬಿನ್ ಬೈರ ನಾಯಕ ಎಂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಪುನಃ ಅಧಾರ್ ಕಾರ್ಡ ನಲ್ಲಿ ಅಕ್ಕ ಪಕ್ಕದವರು ಹೆಸರು ಬರೆಸುವಾಗ ಹಾಗೆ ಆಗಿದ್ದು, ನಂತರ ಅದನ್ನು ಸರಿ ಪಡಿಸಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಗುರುತಿನ ಚೀಟಿಗಳನ್ನು ನೋಡಿಯೆ ಕ್ರಯಪತ್ರ ಬರೆಸಿದ್ದು, ಅದರಂತೆ ಖಾತೆ ಆಗುತ್ತದೆ ಎಂದರೆ ಸರಿ.

ಇದೆ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 129/2019 ರಂತೆ ನಮ್ಮ ತಂದೆ ಭಾಗಾಂಶ ಕೋರಿ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ವಿಚಾರಣೆ ಮಾಡಿಸದ ಕಾರಣ ವಜಾ ಆಗಿರುತ್ತದೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಕೋರೊನ ಇದ್ದು, ತಂದೆಗೆ ಮತ್ತು ನನಗೆ ಕುಟುಂಬದವರೆಲ್ಲರೂ ಕೊರೋನದಿಂದ ಬಳಲುತ್ತಿದ್ದೇವು ಎನ್ನುತ್ತಾರೆ. ಸದರಿ ದಾವೆ ಪುನಃ ಸ್ಥಾಪಿಸಲು Mis petition 5/2021 ರಂತೆ ಕೇಸು ಹಾಕಿದ್ದರು ಎಂದರೆ ಸರಿ. ಸದರಿ Mis petition 5/2021 ಕೇಸಿನಲ್ಲಿ ಯಾವುದೆ ಸಕಾರಣ ತೋರಿಸಿಲ್ಲದ ಕಾರಣ ಸದರಿ ಕೇಸ್ ಸಹ ವಜಾ ಆಗಿರುತ್ತದೆ ಎಂದರೆ ಆ ಸಮಯದಲ್ಲಿ ವಕೀಲರ ನಮಗೆ ಸರಿಯಾಗಿ ಮಾಹಿತಿ ನೀಡಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ Mis petition 5/2021 ಕೇಸು ವಜಾ ಆದನಂತರ ಅದರ ಮೇಲೆ ಅಪೀಲು ಸಲ್ಲಿಸಿದ್ದಿರಾ ಎಂದರೆ ಸಾಕ್ಷಿ ಸದರಿ ಕೇಸ್ ವಜಾ ನಂತರ ಬೇರೆ ವಕೀಲರನ್ನು ನೇಮಿಸಿಕೊಂಡು ಈ ಕೇಸು ಹಾಕಿದ್ದೇವೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತುಗಳನ್ನು ನಾನು ನೋಡಿರುತ್ತೇನೆ. ಐಟಂ ನಂ.3 ಸರ್ವೆ ನಂ. 97/2 ರ ಜಮೀನನ್ನು ಪ್ರಸ್ತುತ ನಮ್ಮ ಇಬ್ಬರು ಚಿಕ್ಕಪ್ಪಂದಿರು ಮತ್ತು ಇಬ್ಬರು ದೊಡ್ಡಪ್ಪಂದಿರ ಕುಟುಂದಬವರು ಸಾಗುವಳಿ ಮಾಡುತ್ತಿದ್ದಾರೆ ಎನ್ನುತ್ತಾರೆ. ನಮ್ಮ ತಂದೆಯ ಚಿಕ್ಕಪ್ಪಂದಿರು ಸದರಿ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ವ್ಯವಸಾಯ ಮಾಡಲು ಕೊಟ್ಟಿರಬಹುದು ಆ ಖಾತೆ ನಮ್ಮ ತಾತನ ಸಣ್ಣ ಸಿದ್ದನಾಯಕ ರವರ ಹೆಸರಿನಲ್ಲಿ ಇರುತ್ತದೆ ಎನ್ನುತ್ತಾರೆ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಅವುಗಳನ್ನು ನಮ್ಮ ತಾತ ಮತ್ತು ಅವರ ಅಣ್ಣ ತಮ್ಮಂದಿರೆ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿ ಖಾತೆ ನಮ್ಮ ತಾತನ ಹೆಸರಿನಲ್ಲೆ ಇದೆ

ಎಂದು ನುಡಿಯುತ್ತಾರೆ. ಐಟಂ ನಂ. 3 ರ ಜಮೀನಿನಲ್ಲಿ ನಮ್ಮ ತಾತನ ತಮ್ಮ ಚೌಡನಾಯಕ ರವರು ವ್ಯವಸಾಯ ಮಾಡುತ್ತಿದ್ದು, ಸದರಿ ರವರನ್ನು ಈ ಕೇಸ್ ನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಸದರಿ ಜಮೀನಿನಲ್ಲಿ ಯಾವುದೆ ವ್ಯವಸಾಯ ಮಾಡುತ್ತಿಲ್ಲ ಎನ್ನುತ್ತಾರೆ. ದಾವಾ ಐಟಂ ನಂ. 2 ಸರ್ವೆ ನಂ. 3/2 ರ ಜಮೀನು ಕಾಲುವೆ ಜಮೀನು ಎಂದು ಅಕ್ವರ್ ಆಗಿರುತ್ತದೆ ಎಂದರೆ ಅದು ಗೊತ್ತಿಲ್ಲ, ಅದರೆ ಆರ್.ಟಿ.ಸಿಯಲ್ಲಿ 1 ಎಕರೆ 8 ಗುಂಟೆ ಇರುತ್ತದೆ ಎನ್ನುತ್ತಾರೆ. ಸದರಿ ಜಮೀನಿನಲ್ಲಿ ಭೂ ಸ್ವಾಧೀನ ಆಗಿರುವುದನ್ನು ತೋರಿಸಲು ಪೂರಾ ಜಮೀನನ್ನು ದಾವೆಯಲ್ಲಿ ತೋರಿಸಿದ್ದೇವೆ ಎಂದರೆ ಆರ್.ಟಿ.ಸಿ ಇದ್ದ ಕಾರಣ ತೋರಿಸಿದ್ದೇವೆ ಎಂದು ನುಡಿಯುತ್ತಾರೆ. ನಾನಾಗಲಿ, ನನ್ನ ತಂದೆ ಆಗಲಿ ದಾವಾ ಆಸ್ತಿಗಳನ್ನು ಯಾವತ್ತೂ ನೋಡಿಲ್ಲದ ಕಾರಣ ನಿಜ ಸ್ಥಿತಿ ಗೊತ್ತಿಲ್ಲ ಎಂದರೆ ಸರಿಯಲ್ಲ.

ವಡ್ಡಂಬಾಳು ಗ್ರಾಮದ ಚೌಡನಾಯಕ ಬಿನ್ ಮೊಗಣ್ಣನಾಯಕ, ನರಸನಾಯಕ ಬಿನ್ ನರಸನಾಯಕ, ನರಸನಾಯಕ ಬಿನ್ ಮೊಗಣ್ಣನಾಯಕ , ಕೃಷ್ಣೇಗೌಡ ಬಿನ ಪುಟ್ಟ ಬಸವೇಗೌಡ ರವರು ನನಗೆ ಗೊತ್ತು, ಅಷ್ಟಾಗಿ ಪರಿಚಯ ಇಲ್ಲ. ಅವರಿಗೂ ನಮಗೂ ಯಾವುದೆ ದ್ವೇಷ ಇರುವುದಿಲ್ಲ. ನಮ್ಮ ತಂದೆ ಸಣ್ಣಪ್ಪನಾಯಕ 12 ವರ್ಷದವರು ಇದ್ದಾಗ ಬೈರ ನಾಯಕ ರವರು ದತ್ತು ತೆಗೆದುಕೊಳ್ಳುವ ಸಮಯದಲ್ಲಿ ದತ್ತು ಹೋಮ ಸಂದರ್ಭದಲ್ಲಿ ಮೇಲೆ ಹೇಳಿದ ಚೌಡನಾಯಕ ಬಿನ್ ಮೊಗಣ್ಣನಾಯಕ, ನರಸನಾಯಕ ಬಿನ್ ನರಸನಾಯಕ, ನರಸನಾಯಕ ಬಿನ್ ಮೊಗಣ್ಣನಾಯಕ, ಕೃಷ್ಣೇಗೌಡ ಬಿನ ಪುಟ್ಟ ಬಸವೇಗೌಡ ಹಾಜರಿದ್ದರು ಎಂದರೆ ಸರಿಯಲ್ಲ. ಹಾಗೆ ದತ್ತು ತೆಗೆದುಕೊಂಡ ನಂತರದಲ್ಲಿ ಪಾಲನೆ ಪೋಷಣೆ ಮಾಡಿದ್ದು ಬೈರ ನಾಯಕರೆ ಎಂದರೆ ಸರಿಯಲ್ಲ. ಅಲ್ಲಿಂದ ಇಲ್ಲಿಯ ವರೆಗೂ ನಮ್ಮ ತಂದೆ ಮೈಸೂರಿನ ಇಲವಾಲದಲ್ಲಿ ವಾಸ ಇರುವುದು ಎಂದರೆ ಸಾಕ್ಷಿ ನಾವು ಮೊದಲಿನಿಂದಲೂ ಅಲ್ಲಿಯೆ ಇರುವುದು ಎಂದು ನುಡಿಯುತ್ತಾರೆ. ದತ್ತು ತೆಗೆದುಕೊಂಡ ಕಾರಣದಿಂದಲೆ ನಮ್ಮ ತಂದೆ ಹೆಸರು ಎಲ್ಲಾ ದಾಖಲೆಗಳಲ್ಲಿಯೂ ಬೈರ ನಾಯಕ ಎಂದು ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ತಾತ ಬೈರ ನಾಯಕರವರಿಗೆ ಮೈಸೂರಿನ ಇಲವಾಲದಲ್ಲಿ ಆಸ್ತಿ ಇದ್ದು, ಅದನ್ನು ನಮ್ಮ ತಂದೆ ಮತ್ತು ನಮ್ಮ ತಾಯಿ ಸೇರಿ ಮಾರಿಕೊಂಡು ಅದರ ಬಂದ ಹಣದಿಂದ ತಂದೆ ತಾಯಿ

ಮತ್ತುನಾವು ಐಷಾರಾಮಿ ಜೀವನ ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ, ಸಾಕ್ಷಿ ನಮ್ಮ ತಾತನ ಹೆಣ್ಣು ಮಕ್ಕಳು ಮಾರಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.